ಬೇಸಿಗೆ ತೀವ್ರಗೊಂಡಂತೆಲ್ಲ ಎಲ್ಲರ ಕಣ್ಣು 'ಹವಾಮಾನ ಇಲಾಖೆ'ಯ ವರ್ತಮಾನದತ್ತ. ಸದ್ಯದಲ್ಲಿ ಎಲ್ಲಿಯಾದರೂ ಮಳೆ ಆದೀತಾ ಎನ್ನುವ ಕುತೂಹಲ. ಇತ್ತೀಚಿನ ವರ್ಷಗಳಲ್ಲಿ ಹವಾಮಾನ ವೈಪರೀತ್ಯಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ 'ಹವಾಮಾನ ಇಲಾಖೆ'ಯ ಪ್ರಕಟಣೆಗಳಿಗೆ ಇನ್ನಿಲ್ಲದ ಮಹತ್ವ. ಹೀಗೆ, ಮಳೆ–ಗಾಳಿಯ ಲೆಕ್ಕಾಚಾರವನ್ನು ಜನಸಾಮಾನ್ಯರಿಗೆ ತಿಳಿಸುತ್ತಾ ಬಂದಿರುವ 'ಭಾರತೀಯ ಹವಾಮಾನ ಇಲಾಖೆ'ಗೀಗ 150ನೇ ವರ್ಷಾಚರಣೆಯ ಸಂಭ್ರಮ.

ಅತಿ ಹೆಚ್ಚು ಜನಸಂಖ್ಯೆ ಇರುವ ಹಾಗೂ ಸದಾಕಾಲ ಬಿಸಿಲು ಲಭ್ಯವಿರುವ ಸಂಪದ್ಭರಿತ ದೇಶವಾದ ಭಾರತದಲ್ಲಿ ಹವಾಮಾನ ಮುನ್ಸೂಚನೆಯನ್ನು ನೀಡುವುದು ಸವಾಲಿನ ಕೆಲಸ. ಆದಾಗ್ಯೂ ಭಾರತೀಯ ಹವಾಮಾನ ಇಲಾಖೆ ಕಾಲಕಾಲಕ್ಕೆ ಒದಗಿಬರುವ ಕೌಶಲ, ತಂತ್ರಜ್ಞಾನ ಮತ್ತು ಸಂಪನ್ಮೂಲಗಳನ್ನು ಬಳಸಿಕೊಂಡು ಭಾರತ ಮತ್ತು ಜಗತ್ತಿನ ಹವಾಮಾನ ಮುನ್ಸೂಚನಾ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸುವಲ್ಲಿ ಯಶಸ್ವಿಯಾಗಿದೆ.

'ಭಾರತೀಯ ಹವಾಮಾನ ಇಲಾಖೆ' (ಐಎಂಡಿ) ಆರಂಭಗೊಂಡದ್ದು ಸ್ವಾತಂತ್ರ್ಯಪೂರ್ವದಲ್ಲಿ, 1875ರಲ್ಲಿ. ಪ್ರಸ್ತುತ ಈ ಸಂಸ್ಥೆ ಜಗತ್ತಿನ ಅತ್ಯಾಧುನಿಕ ಮತ್ತು ವಿಶ್ವಾಸಾರ್ಹ ಹವಾಮಾನ ಸಂಸ್ಥೆಗಳ ಪೈಕಿ ಒಂದಾಗಿ ತಲೆಯೆತ್ತಿ ನಿಂತಿದೆ. ಅತ್ಯಾಧುನಿಕ ತಂತ್ರಜ್ಞಾನ ಮತ್ತು ವೈಜ್ಞಾನಿಕ ಪರಿಣತಿಯೊಂದಿಗೆ 'ಐಎಂಡಿ' ಇಂದು ಹವಾಮಾನ ಮುನ್ಸೂಚನೆಗಳನ್ನು ನೀಡುವುದರ ಮೂಲಕ, ಪ್ರಕೃತಿ ವಿಕೋಪದಂತಹ ಹತ್ತಾರು ಸಮಸ್ಯೆಗಳಿಂದ ಜನಜೀವನವನ್ನು ಪಾರು ಮಾಡುವ ಆಪದ್ಬಾಂಧವ ಸಂಸ್ಥೆಯೆನಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ.

ಭಾರತೀಯ ಹವಾಮಾನ ಸಂಸ್ಥೆಯ ಹುಟ್ಟು ಮತ್ತು ಬೆಳವಣಿಗೆಯ ಕಡೆಗೆ ಕಣ್ಣು ಹಾಯಿಸುವುದಾದರೆ ಸುಮಾರು ಒಂದೂವರೆ ಶತಮಾನದಷ್ಟು ಹಿಂದಕ್ಕೆ ತಿರುಗಿ ನೋಡಬೇಕಾಗುತ್ತದೆ.

1864ರಲ್ಲಿ ಭಾರತದಲ್ಲಿ ಭಾರೀ ಚಂಡಮಾರುತ ಅಪ್ಪಳಿಸಿದಾಗ, ಸುಮಾರು 60 ಸಾವಿರ ಜನ ಜೀವ ಕಳೆದುಕೊಂಡರು. ಅಷ್ಟೇ ಅಲ್ಲ, ದೇಶದಾದ್ಯಂತ ಹಲವು ಕಡೆಗಳಲ್ಲಿ ಬೆಳೆದ ಆಹಾರ ಬೆಳೆಗಳು ನಾಶವಾಗಿದ್ದರಿಂದ ಸಂಬಾರ ಪದಾರ್ಥಗಳು ಸೇರಿದಂತೆ ರಫ್ತು ಕ್ಷೇತ್ರಕ್ಕೆ ಅಗತ್ಯವಾಗಿದ್ದ ಬೆಲೆಬಾಳುವ ಆಹಾರಧಾನ್ಯಗಳ ಕೊರತೆ ದೇಶದಲ್ಲಿ ಎದುರಾಯಿತು. ಅದೇಕಾಲಕ್ಕೆ ಆಗ ಭಾರತದ ಭಾಗವಾಗಿದ್ದ ಬಂಗಾಲದಲ್ಲಿ ಮಳೆ ಬಾರದೇ ಕ್ಷಾಮ ತಲೆದೋರಿತು. 1866 ಮತ್ತು 1871ರಲ್ಲಿ ತೀವ್ರಕ್ಷಾಮದಿಂದ ಜನರು ಆಹಾರವಿಲ್ಲದೆ ಬಳಲಲಾರಂಭಿಸಿದರು. ಹವಾಮಾನಕ್ಕೆ ಸಂಬಂಧಿಸಿದ ಮುನ್ಸೂಚನೆಗಳು ಒಂದುವೇಳೆ ಲಭ್ಯವಾಗಿದ್ದಿದ್ದರೆ ಏನಾದರೂ ಪೂರ್ವತಯಾರಿ ಮಾಡಿಕೊಳ್ಳಬಹುದಿತ್ತು ಎನ್ನುವುದು ಆಡಳಿತವರ್ಗದ ಗಮನಕ್ಕೆ ಬಂತು.

ಹವಾಮಾನವನ್ನು ಅಂದಾಜು ಮಾಡುವ ಪ್ರಕ್ರಿಯೆ ನಮ್ಮ ದೇಶದಲ್ಲಿ ಪಾರಂಪರಿಕ ಜ್ಞಾನದ ರೂಪದಲ್ಲಿ ಚಾಲ್ತಿಯಲ್ಲಿದೆ. ಆದರೆ, ವೈಜ್ಞಾನಿಕ ಹಾಗೂ ಅಧಿಕೃತ ಎನ್ನಲಾದ ದೇಶದ ಪ್ರಥಮ ಹವಾಮಾನ ಮತ್ತು ಖಗೋಳಶಾಸ್ತ್ರ ವೀಕ್ಷಣಾಲಯ 1793ರಲ್ಲಿ ಮದ್ರಾಸ್‌ನಲ್ಲಿ ಸ್ಥಾಪನೆಗೊಂಡಿತ್ತು. ನಂತರದ ವರ್ಷಗಳಲ್ಲಿ






ಹವಾಮಾನ ಇಲಾಖೆಯ ಮುನ್ಸೂಚನೆಗಳು ಮೀನುಗಾರರಿಗೆ ದೈವವಾಣಿ ಇದ್ದಂತೆ. ಮೀನುಶಿಕಾರಿಯ ದೋಣಿಗಳನ್ನು ಕಡಲಿಗೆ ಇಳಿಸಬೇಕೇ ಬೇಡವೇ ಎಂದು ನಿರ್ಧರಿಸಲು 'ಐಎಂಡಿ' ಸೂಚನೆಗಳೇ ನಿರ್ಣಾಯಕ.